**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಉಪ ಆರೋಗ್ಯಾಧಿಕಾರಿ (ಪೂರ್ವ) ರೆಸಿಡೆನ್ಸಿ ರೋಡ್, ಮೇಯೋಹಾಲ್ ಬೆಂಗಳೂರು.**

**ಸಂಖ್ಯೆ : ಉಪ(ಪೂ)/ಪಿಆರ್/977/2020-21** **ದಿನಾಂಕ : 26.11.2020**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ -116 ನೀಲಸಂದ್ರ ವ್ಯಾಪ್ತಿಯ ಎಸ್.ಆರ್.ಕೆ ಕನ್ವೆಷನ್ ಹಾಲ್‌ರಲ್ಲಿ ದಿನಾಂಕ : 26-11-2020 ರಂದು ಮಧ್ಯಾಹ್ನ 2:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದ ಸದ್ಯಸರು ಹಾಗೂ ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದ್ಯಸರ ಹೆಸರುಗಳು |
|---|---|
| 1 | ಡಾ॥ ಸಂಗಮಿತ್ರ ನೋಡಲ್ ಅಧಿಕಾರಿ (ನೀಲಸಂದ್ರ 116) ಹಾಗೂ ಉಪ ಆರೋಗ್ಯಾಧಿಕಾರಿಗಳು ಪೂರ್ವ. |
| 2 | ಶ್ರೀ ಮಧು ಆರ್, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ. |
| 3 | ಶ್ರೀಮತಿ ಎಂ. ಫರ್ಜಾನಾ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) |
| 4 | ಶ್ರೀ ಹರ್ಷ ಎಸ್, ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 5 | ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯಾ) |
| 6 | ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 7 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 8 | ಶ್ರೀ ಬಸವರಾಜ, ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ |
| 9 | ಶ್ರೀ ಡಾ॥ ಚೈತ್ರಾ, ವೈದ್ಯರು, ನೀಲಸಂದ್ರ |
| 10 | ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 11 | ಶ್ರೀ ಅಕ್ರಮ್ ಪಾಷಾ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 12 | ಶ್ರೀ ಮನೋಜ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ. |
| 13 | ಶ್ರೀ ವೆಂಕಟೇಶ್ವರ್ ರೆಡ್ಡಿ, ಸಹಾಯಕ ಅಭಿಯಂತರರು, ಬೆಸ್ಕಾಂ. |
| 14 | ಶ್ರೀ ಕುಮಾರ್, ಅಶೋಕನಗರ, ಲಾ & ಆರ್ಡರ್, ಪೊಲೀಸ್ ಇಲಾಖೆ |
| 15 | ಶ್ರೀ ಗೋವಿಂದ್‌ರಾಜು, ಆಡುಗೋಡಿ, ಲಾ & ಆರ್ಡರ್ ಪೊಲೀಸ್ ಇಲಾಖೆ |
| 16 | ಶ್ರೀ ಮೋಹನ್‌ಕುಮಾರ್, ಆಡುಗೋಡಿ, ಸಂಚಾರ ಪೊಲೀಸ್ ಇಲಾಖೆ. |
| 17 | ಶ್ರೀಮತಿ ಷರೀಫ್, ಸದ್ಯಸರು (ನೀಲಸಂದ್ರ) |
| 18 | ಶ್ರೀಮತಿ ಅಮೃತಾ ಮೇರಿ, ಸದ್ಯಸರು (ನೀಲಸಂದ್ರ) |
| 19 | ಶ್ರೀಮತಿ ಸುಮತಿ, ಸದ್ಯಸರು (ನೀಲಸಂದ್ರ) |

| | |
|---|---|
| 20 | ಶ್ರೀ ಗೋವಿಂದ್‌ರಾಜ್, ಸದ್ಯಸರು (ನೀಲಸಂದ್ರ) |
| 21 | ಶ್ರೀ ಅನೀಜ್ ಭೈ, ಸದ್ಯಸರು (ನೀಲಸಂದ್ರ) |
| 22 | ಶ್ರೀ ಇದ್ರೀಜ್, ಸದ್ಯಸರು (ನೀಲಸಂದ್ರ) |
| 23 | ಶ್ರೀ ಅಲ್‌ಫೋಜ್, ಸದ್ಯಸರು (ನೀಲಸಂದ್ರ) |
| 24 | ಶ್ರೀ ಶಿವಕುಮಾರ್, ಸದ್ಯಸರು (ನೀಲಸಂದ್ರ) |

ಸಮಿತಿಯ ಅಧ್ಯಕ್ಷರು ಸ್ಥಳಿಯ ಶಾಸಕರಾದ, ಸನ್ಮಾನ್ಯ ಶ್ರೀ ಎನ್.ಎ. ಹ್ಯಾರಿಸ್, ರವರ ಅಧ್ಯಕ್ಷತೆಯಲ್ಲಿ ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

ಸಮಿತಿ ಅಧ್ಯಕ್ಷರು ಮಾತನಾಡುತ್ತಾ ದಿನಾಂಕ : 07-11-2020ರಂದು ನಡೆದ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಶ್ರೀಮತಿ ಡಾ॥ ಸಂಗಮಿತ್ರ ವಾರ್ಡಿನ ನೋಡಲ್ ಅಧಿಕಾರಿಯವರು ಸಭೆಯನ್ನು ಮುಂದುವರೆಸುತ್ತಾ, ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

1) **ಬೆಸ್ಕಾಂ ಇಲಾಖೆ** :-

- ಶ್ರೀ ಅಲ್‌ಫೋಜ್, ಸದ್ಯಸರು (ನೀಲಸಂದ್ರ)- ರೋಜ್‌ಗಾರ್ಡ್‌ನ್ 7ನೇ.ಎ ಅಡ್ಡರಸ್ತೆಯಲ್ಲಿ ಬೀದಿ ದೀಪವನ್ನು ಅಳವಡಿಸಿರುವುದಕ್ಕೆ ಧನ್ಯವಾದ ತಿಳಿಸುತ್ತಾ, ಇನ್ನು ಕೆಲವು ಪ್ರದೇಶಗಳಲ್ಲಿ ಬೀದಿ ದೀಪ ಸರಿಪಡಿಸಲು ಕೋರಿದರು, ಇದನ್ನು ಶ್ರೀ ಮನೋಜ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
- ಶ್ರೀ ಇದ್ರೀಜ್, ಸದ್ಯಸರು (ನೀಲಸಂದ್ರ), ರೋಜ್ ಗಾರ್ಡ್‌ನ್, 1ನೇ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ ಹಾಗೂ ಕೆಲವು ಪ್ರದೇಶಗಳಲ್ಲಿ ಬೀದಿ ದೀಪ ಸರಿಪಡಿಸಲು ಕೋರಿದರು, ಇದನ್ನು ಶ್ರೀ ಮನೋಜ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
- ಶ್ರೀ ಅನೀಜ್ ಅಕ್ತರ್, ಸದ್ಯಸರು (ನೀಲಸಂದ್ರ) ರವರು ಸೌತ್ ಅಡ್ಡರಸ್ತೆ, 4ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ಕಂಬವು ದುಸ್ಥಿತಿಯಲ್ಲಿದ್ದು ಸಾರ್ವಜನಿಕರಿಗೆ ಅಪಾಯ ಉಂಟಾಗುವ ಸಂಭವವಿದದ್ದು, ಸದರಿ ವಿದ್ಯುತ್ ಕಂಬವನ್ನು ತೆರವುಗೊಳಿಸಲು ಕೋರಿದರು, ಇದನ್ನು ಶ್ರೀ ಮನೋಜ್‌ಕುಮಾರ್. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
- ಸಾರ್ವಜನಿಕರ ದೂರು: ರೋಜ್ ಗಾರ್ಡ್‌ನ್, 7ನೇ ಅಡ್ಡರಸ್ತೆ ಹಾಗೂ 8ನೇ ಅಡ್ಡರಸ್ತೆಯಲ್ಲಿ ಬೀದಿದೀಪದ ಕಂಬ ವಾಲಿರುವುದರಿಂದ ಹಾಗೂ Dripping ಉಂಟಾಗುವ ಸಂಭವವಿದ್ದು, ಸಾರ್ವಜನಿಕರಿಗೆ ಅಪಾಯ ಉಂಟಾಗದಂತೆ, ವಿದ್ಯುತ್ ಕಂಬವನ್ನು ಸರಿಪಡಿಸಲು ಕೋರಿದರು. ಇದನ್ನು ಶ್ರೀ ಮನೋಜ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸದರಿ ವಿಷಯದ ಬಗ್ಗೆ ಮುಜಾಗ್ರತಾ ಕ್ರಮವಹಿಸಿ, ಕೈಗೊಳ್ಳಲಾಗುವುದೆಂದು ತಿಳಿಸಿದರು.

2) **ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆ** :

- ಶ್ರೀ ಗೋವಿಂದ್‌ರಾಜ್, ಸದ್ಯಸರು (ನೀಲಸಂದ್ರ), ಅಂಬೇಡ್ಕರ್ ನಗರ, ಎಲ್.ಆರ್. ನಗರ ಕ್ರಾಸ್ ಪ್ರದೇಶದ ನಿವಾಸಿಗಳಿಗೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲವೆಂದು ಹಾಗೂ ಅಂಬೇಡ್ಕರ್ ನಗರ ಕ್ರಾಸ್ ರಸ್ತೆಯಲ್ಲಿ ಮ್ಯಾನ್‌ಹೋಲ್ ಬ್ಲಾಕ್‌ಯಾಗಿದ್ದ ಕಾರಣ ಅದನ್ನು ಶುದ್ಧಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾಹನವನ್ನು ಕಳುಹಿಸಲು ಹಾಗೂ ವೆಟ್‌ವೆಲ್ ಪಂಪ್‌ನ್ನು ಸರಿಪಡಿಸಲು ಸಮತಾ ನಗರಯಿಂದ ಅಂಬೇಡ್ಕರ್ ನಗರಕ್ಕೆ ಬರುವ ಪೈಪ್‌ಗಳ ಕನೇಕ್ಷನ್ ನೀಡಲು ಕೋರಿದರು. ಇದನ್ನು ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು.
- ಶ್ರೀ ಅನೀಜ್ ಅಕ್ತರ್, ಸದ್ಯಸರು (ನೀಲಸಂದ್ರ),-ಮುನಿಸ್ವಾಮಿ ಗಾರ್ಡನ್ ಮತ್ತು ಸೌತ್ ಕ್ರಾಸ್ ಸ್ಟ್ರೀಟ್‌ಯಲ್ಲಿ ಮ್ಯಾನ್‌ಹೋಲ್ ಬ್ಲಾಕ್‌ಯಾಗಿದ್ದ ಕಾರಣ ಅದನ್ನು ಶುದ್ಧಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾಹನವನ್ನು ಕಳುಹಿಸಲು ಕೋರಿದರು. ಇದನ್ನು ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು.
- ಶ್ರೀ ಇದ್ರೀಜ್, ಸದ್ಯಸರು (ನೀಲಸಂದ್ರ)-ಸೌತ್ ಕ್ರಾಸ್ ಸ್ಟ್ರೀಟ್ ಮತ್ತು ಕ್ರಾಸ್‌ರಸ್ತೆಗಳ ಪ್ರದೇಶಗಳಲ್ಲಿ ಮ್ಯಾನ್‌ಹೋಲ್‌ಗಳು ತಗ್ಗು ಪ್ರದೇಶದಲ್ಲಿದ್ದು ಅದನ್ನು ಸರಿಪಡಿಸಲು ಕೋರಿದರು. ಇದನ್ನು ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಸ್ಥಳಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು.
- ಸಾರ್ವಜನಿಕರ ದೂರು : ವಾರ್ಡ್ ವ್ಯಾಪ್ತಿಯಲ್ಲಿನ ಅಂಬೇಡ್ಕರ್ ನಗರ, 5ನೇ ಮುಖ್ಯ ರಸ್ತೆ, ಎಲ್.ಆರ್.ನಗರ, 2ನೇ ಅಡ್ಡರಸ್ತೆ ಯಿಂದ 11ನೇ ಅಡ್ಡರಸ್ತೆ ವರೆಗೂ ಸರಿಯಾಗಿ ನೀರು ಸರಬರಾಜು ಆಗದ ಕಾರಣ ನೀರು ಸರಬರಾಜು ಮಾಡಲು ಕೋರಿರುತ್ತಾರೆ. ಇದನ್ನು ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಎಲ್. ಆರ್.ನಗರ ಮುಖ್ಯ ರಸ್ತೆಯಲ್ಲಿ ಪೈಪಲೈನ್ ಕಾಮಗಾರಿಯನ್ನು ಅತೀ ಜರೂರಾಗಿ ಗುತ್ತಿಗೆದಾರರ ಮುಖಾಂತರ ಪ್ರಾರಂಭಿಸಲು ತಿಳಿಸಿರುತ್ತಾರೆ.

3) **ಪೋಲೀಸ್ ಇಲಾಖೆ**:-

- ಸಾರ್ವಜನಿಕರ ದೂರು : ವಾರ್ಡ ವ್ಯಾಪ್ತಿಯಲ್ಲಿನ ಬಜಾರ್ ಸ್ಟ್ರೀಟ್, ಮುಖ್ಯ ರಸ್ತೆಯನ್ನು ಅನಧಿಕೃತವಾಗಿ ಹಲವಾರು ಪ್ರದೇಶಗಳಲ್ಲಿ ತಳ್ಳುಗಾಡಿಗಳು ಹಾಗೂ ವಾಹನಗಳನ್ನು ನಿಲ್ಲಿಸಿರುತ್ತಾರೆ ಆದ ಕಾರಣ ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗುತ್ತಿದ್ದು, ಇದನ್ನು ಸರಿಪಡಿಸಲು ಕೋರಿದರು. ಇದನ್ನು ಅಶೋಕ ನಗರ, ಟ್ರಾಫೀಕ್ ಹಾಗೂ ಲಾ & ಆರ್ಡ್‌ರ್ ಪೊಲೀಸ್ ಇಲಾಖೆಯವರು ಸರಿಪಡಿಸುತ್ತೆವೆಂದು ತಿಳಿಸಿದರು.
- ಸಾರ್ವಜನಿಕರ ದೂರು: ವಾರ್ಡ ವ್ಯಾಪ್ತಿಯ ಎಲ್.ಆರ್.ನಗರ ಮುಖ್ಯ ರಸ್ತೆ ಹಾಗೂ ಪೊಲೀಸ್ ಚೌಕ ಹತ್ತಿರದ ಸೇತುವೆಯ ಸ್ಥಳದಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸಿರುತ್ತಾರೆ, ಇದನ್ನು ತೆರೆವುಗೊಳಿಸಲು ಕೋರಿದರು. ಇದನ್ನು ಸರಿಪಡಿಸಲು ಕೋರಿದರು. ಇದನ್ನು ಆಡುಗೊಡಿ ಟ್ರಾಫೀಕ್ ಹಾಗೂ ಲಾ & ಆರ್ಡ್‌ರ್ ಪೊಲೀಸ್ ಇಲಾಖೆಯವರು ಸರಿಪಡಿಸುತ್ತೆವೆಂದು ತಿಳಿಸಿದರು.

4) **ಸ್ವಚತೆ ಮತ್ತು ಘನತ್ಯಾಜ್ಯಾ ನಿರ್ವಹಣೆ:**

- ವಾರ್ಡ್ ವ್ಯಾಪ್ತಿಯಲ್ಲಿನ ರೋಸ್‌ಗಾರ್ಡನ್, ತಿಮ್ಮರಾಯಪ್ಪಾ ಗಾರ್ಡನ್, ನೀಲಸಂದ್ರ ಸುಮಾರು ಪ್ರದೇಶಗಳಲ್ಲಿ ಕಸ ವಿಂಗಡಣೆ ಮಾಡದೆ ಆಟೋ, ಟಿಪ್ಪರ್‌ಗಳಲ್ಲಿ ಹಾಕುವುದು ಕಂಡುಬಂದಿರುತ್ತದೆ. ಹಾಗೂ ಘನತ್ಯಾಜ್ಯಾ ವಿಲೇವಾರಿ ಬಗ್ಗೆ ಜನರಲ್ಲಿ ಅರಿವು ಮುಂಡಿಸಬೇಕು ಮತ್ತು ಒಣಕಸ, ಹಸಿಕಸ ಪ್ರತ್ಯೇಕವಾಗಿ ನೀಡಲು ಆಟೋ, ಟಿಪ್ಪರ್‌ನಲ್ಲಿ ಮೈಕ್ ಮೂಲಕ ಪ್ರಚಾರ ಮಾಡಿ ಅರಿವು ಮೂಡಿಸಲು ತಿಳಿಸಿದರು. ಇದನ್ನು ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯಾ ನಿರ್ವಹಣೆ) ರವರು ಸರಿಯಾದ ಮುಜಾಗ್ರತವನ್ನು ತೆಗೆದುಕೊಂಡು ಕಸವನ್ನು ವಿಲೇವಾರಿ ಮಾಡವುದರ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಲು ತಿಳಿಸಿದರು.

- ವಾರ್ಡ ವ್ಯಾಪ್ತಿಯಲ್ಲಿನ ರೋಸ್ ಗಾರ್ಡನಿನ ಬದಿಯಲ್ಲಿ ಮೈದಾನದಲ್ಲಿ ಅನಧಿಕೃತವಾಗಿ ಕಸವನ್ನು ಹಾಕುತ್ತಿರುತಾರೆ, ಅವರಿಗೆ ತಿಳುವಳಿಕೆ ನೀಡಿ ಮುಜಾಗ್ರತಾ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಇದನ್ನು ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯಾ ನಿರ್ವಹಣೆ) ರವರು ಸರಿಯಾದ ಮುಜಾಗ್ರತವನ್ನು ತೆಗೆದುಕೊಂಡು ಕಸವನ್ನು ಹಾಕದಿರುವ ಹಾಗೆ ಕ್ರಮವಹಿಸಿ, ವಾರ್ಡ ಮಾರ್ಷಲಿನ ಸಮನ್ವಯದೊಂದಿಗೆ ದಂಡವಿಧಿಸಿ, ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.

5) **ಆರೋಗ್ಯ ಇಲಾಖೆ :**

- ವಾರ್ಡ ವ್ಯಾಪ್ತಿಯ ಪ್ರತಿ ರಸ್ತೆಗಳಲ್ಲಿ ಸೊಂಕು ನಿವಾರಕ ಔಷಧಿಗಳ (Sanitaization, spraying & fogging) ಸಿಂಪಡಣೆಯನ್ನು ಪ್ರತಿ ವಾರದ ಸೂಮವಾರ, ಬುದವಾರ ಮತ್ತು ಶನಿವಾರದಂದು ಸಿಂಪಡಿಸುವುದು ಹಾಗೂ ಮಾಸ್ಕ್‌ಗಳನ್ನು ಉಪಯೋಗಿಸುವುದು, ಸಾರ್ವಜನಿಕರ ಮಧ್ಯ ಅಂತರ ಕಾಪಾಡುವುದು ಹಾಗೂ ಸರ್ಕಾರದ ಹಾಗೂ ಬಿಬಿಎಂಪಿ ವತಿಯಿಂದ ಕೊರೊನಾ ವೈರಸ್ (ಕೋವಿಡ್-19) ಸಂಬಂಧ ಜಾರಿಯಲ್ಲಿರುವ ಹಾಗೂ ಮುಂದೆ ನೀಡಬಹುದಾದ ಎಲ್ಲಾ ನಿಯಮಗಳನ್ನು ತಪ್ಪದೆ ಪಾಲಿಸಲು ಹಾಗೂ ಎಲ್ಲಾ ಸೂಚನೆ ಮತ್ತು ಆದೇಶಗಳನ್ನು ಮೀರದಂತೆ ಜಾಗರುಕತೆ ಮೂಡಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ತಿಳಿಸಿದರು. ಇದನ್ನು ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) ರವರು ಸೂಕ್ತ ಕ್ರಮಕೈಗೊಳ್ಳಲಾಗುವೆಂದು ತಿಳಿಸಿದರು.

6) **ಇಂಜಿನೀಯರಿಂಗ್ ಇಲಾಖೆ :**

- ವಾರ್ಡ ವ್ಯಾಪ್ತಿಯಲ್ಲಿನ ಎಲ್.ಆರ್.ನಗರ ಬ್ರೀಡ್ಜ್ ಹಾಗೂ ರೋಜ್ ಗಾರ್ಡನ್ ಅಡ್ಡರಸ್ತೆಗಳಲ್ಲಿ ಹಲವಾರು ಪ್ರದೇಶಗಳಲ್ಲಿ ಡೆಬ್ರೀಸ್‌ವಿದ್ದು ತೆರವುಗೊಳಿಸಲು ಕೋರಿದರು. ಇದನ್ನು ಶ್ರೀ ಹರ್ಷ ಎಸ್. ಕಿರಿಯ ಅಭಿಯಂತರರು, ನೀಲಸಂದ್ರ ರವರು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

7) **ಕಂದಾಯ ಇಲಾಖೆ :**

- ಸಾರ್ವಜನಿಕರ ಲಿಖಿತ ದೂರು : ವಾರ್ಡ ವ್ಯಾಪ್ತಿಯಲ್ಲಿನ ಅಂಬೇಡ್ಕರ್ ನಗರ, ಮತ್ತು ಎಲ್.ಆರ್.ನಗರದಲ್ಲಿ ಕಂದಾಯ ವಸೂಲಿಯನ್ನು ಸಂಪರ್ಕವಾಗಿ ನಿರ್ವಹಿಸಲು ಹಾಗೂ ಉತ್ತರ ಪತ್ರ, ಕ್ರಯಪತ್ರ ಸರಿಯಾದ ಮಾದರಿಯಲ್ಲಿ ಒದಗಿಸಲು ಕೋರಿರುತ್ತಾರೆ. ಇದರ ಸಂಬಂಧವಾಗಿ, ಶ್ರೀ ಬಸವರಾಜ, ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ ರವರು ಸಮಸ್ಯೆಯನ್ನು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮವಹಿಸಲು ಸೂಚಿಸಿದೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡುತ್ತಾ ಮುಂದಿನ ಸಭೆಯಲ್ಲಿ ಸ್ಲಮ್ ಬೋರ್ಡ್ ಇಲಾಖೆ ಹಾಗೂ ಬಿಡಿಎ ಇಲಾಖೆ ರವರನ್ನು ಮುಂದಿನ ಸಭೆಯಲ್ಲಿ ಆಹ್ವಾನಿಸಲು ತಿಳಿಸಿದರು ಹಾಗೂ ಮೇಲೆ ತಿಳಿಸಿರುವಂತೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೊರುತ್ತಾ ಮುಂದಿನ ಸಭೆಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂದು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದ್ಯಸರುಗಳಿಗೆ ತಿಳಿಸುತ್ತಾ ಸಭೇಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದ್ಯಸರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿ ಮತ್ತು | ಅಧ್ಯಕ್ಷರು ಮತ್ತು |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ –116 ನೀಲಸಂದ್ರ | ವಾರ್ಡ –116 ನೀಲಸಂದ್ರ |

ಪ್ರತಿಗಳನ್ನು :–

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ (ಘನತ್ಯಾಜ್ಯಾ ನಿರ್ವಹಣೆ) ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.
8) ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ, ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.
9) ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಅವಗಾಹನೆಗೆ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ರವರ ಅವಗಾಹನೆಗೆ ಸಲ್ಲಿಸಿದೆ.
12) ಆಡುಗೋಡಿ/ಅಶೋಕನಗರ, ಟ್ರಾಫೀಕ್ ಮತ್ತು ಲಾ & ಆರ್ಡರ್ ಪೊಲೀಸ್ ಇಲಾಖೆ, ರವರ ಅವಗಾಹನೆಗೆ ಸಲ್ಲಿಸಿದೆ.
13) ಆರೋಗ್ಯಾಧಿಕಾರಿಗಳು, ಶಾಂತಿನಗರ, ರವರ ಅವಗಾಹನೆಗೆ ಸಲ್ಲಿಸಿದೆ.
14) ಕಛೇರಿ ಕಡತಕ್ಕೆ.